Publication ~ Samyukta Karnataka
Date ~ December 13, 2007
Edition ~ Bangalore

# MapmyIndia : Launches GPS Navigator

# ಮ್ಯಾಪ್‌ಮೈ ಇಂಡಿಯಾ: ಜಿಪಿಎಸ್ ತಂತ್ರಜ್ಞಾನ ಅಳವಡಿಕೆ

ಬೆಂಗಳೂರು, ಡಿ. ೧೨- ಪ್ರಯಾಣಿಕರಿಗೆ ಇದೋ ಸಂತಸದ ಸುದ್ದಿ. ರಾಷ್ಟ್ರದಲ್ಲಿ ಪ್ರಯಾಣ ಭೂಪಟವನ್ನು ಸಿದ್ಧಪಡಿಸುವ ಸಂಸ್ಥೆಗಳ ಪೈಕಿ ಮುಂಚೂಣಿಯಲ್ಲಿರುವ ಮ್ಯಾಪ್‌ಮೈ ಇಂಡಿಯಾ ಪ್ರಯಾಣಿಕರಿಗೆ ಸ್ಥಳಗಳ ಹಾಗೂ ರಸ್ತೆಗಳ ಬಗ್ಗೆ ಮಾಹಿತಿ ನೀಡಲು ಕಾರುಗಳಲ್ಲಿ ಜಿಪಿಎಸ್ ತಂತ್ರಜ್ಞಾನ ಸಾಧನವನ್ನು ಅಳವಡಿಸಿದೆ.



ಉಪಗ್ರಹದೊಂದಿಗೆ ನೇರ ಸಂಪರ್ಕ ಹೊಂದಿರುವ ಜಿಪಿಎಸ್ ಸಾಧನ ರಾಷ್ಟ್ರದಲ್ಲಿನ ಪ್ರತಿಯೊಂದು ಸ್ಥಳದ ಹಾಗೂ ರಸ್ತೆಗಳ ಬಗ್ಗೆ ಕಾರಿನಲ್ಲಿದ್ದವರಿಗೆ ಧ್ವನಿಯ ಮೂಲಕ ಮಾಹಿತಿ ನೀಡುತ್ತದೆ.

ನಗರದ ಒಳಗಡೆ ಹಾಗೂ ಹೊರಗಡೆಯಿಂದ ಹಾದು ಹೋಗುವ ರಸ್ತೆಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ದಾರಿಯಲ್ಲಿ ಮುಂದೆ ಯಾವ ತಿರುವಿನಲ್ಲಿ ಸಾಗಬೇಕು, ಪ್ರಯಾಣದ ಅವಧಿ-ಹೀಗೆ ಪ್ರಯಾಣಿಕರಿಗೆ ಅಗತ್ಯವಿರುವ ಎಲ್ಲ ಮಾಹಿತಿಗಳನ್ನು ಜಿಪಿಎಸ್ ಸಾಧನ ನೀಡುತ್ತದೆ.

ಸೇವೆಯ ನಿರ್ವಹಣೆ ಹಾಗೂ ಮಾರುಕಟ್ಟೆಗಾಗಿ ಐದು ದಶಲಕ್ಷ ಡಾಲರ್‌ಗಳಷ್ಟು ಹಣವನ್ನು ವಿನಿಯೋಗಿಸಲಾಗಿದೆ ಎಂದು ಮ್ಯಾಪ್ ಮೈ ಇಂಡಿಯಾ ವತಿಯಿಂದ ಹೊರಡಿಸಲಾದ ಪ್ರಕಟಣೆ ತಿಳಿಸಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮ್ಯಾಪ್‌ಮೈಇಂಡಿಯಾ.ಕಂ ವಿಳಾಸವನ್ನು ಸಂಪರ್ಕಿಸಬಹುದಾಗಿದೆ.